International Journal of Academic Research
ISSN: 2348-7666; Vol.9, Issue-2(3), February, 2022
Impact Factor: 6.023; Email: drtvramana@yahoo.co.in

# ಕಾಡುಗೊಲ್ಲ ಮತ್ತು ಇಸ್ಲಾಂ ಸಮುದಾಯದ ಭಾವೈಕ್ಯತೆ– ಒಂದು ಅದ್ಯಾಯನ.

**ಶ್ರೀನಿವಾಸ.ಟಿ**
**ಸಹಾಯಕ ಪ್ರಾಧ್ಯಾಪಕರು**
**ಸಮಾಜ ಶಾಸ್ತ್ರ ವಿಭಾಗ**
**ಸರ್ಕಾರಿ ಪ್ರಥಮ ದರ್ಜೆ ಕಾಲೇಜು**
**ನೆಲಮಂಗಲ**
**ಬೆಂಗಳೂರು ಗ್ರಾಮಾಂತರ**

***ಸಾರಂಶ:*** *ಭಾರತವನ್ನು 'ಜನಾಂಗೀಯ ವಸ್ತುಸಂಗ್ರಹಾಲಯ' ಎಂದು ಕರೆಯುತ್ತಾರೆ. ವಿವಿದತೆಯಲ್ಲಿ ಏಕತೆ ಅಥವಾ ಸಮಾಜದ ಐಕ್ಯತೆಗೆ ಪೂರಕವಾಗಿರುತ್ತದೆ. ಪ್ರತಿಯೊಂದು ಸಮುದಾಯವು ಕೂಡ ಸ್ಥಿತ್ಯಂತರಗೊಳ್ಳುತ್ತಿರುತ್ತದೆ. ಈ ಸಂದರ್ಭದಲ್ಲಿ ಹೊಂದಾಣಿಕೆ, ಘರ್ಷಣೆಗಳಾಗುವುದು ಸಹಜ. ಕಾಡುಗೊಲ್ಲ ಮತ್ತು ಮುಸ್ಲೀಂ ಸಮುದಾಯದವರು ಗಂಡಿಹಳ್ಳಿ ಮಠ, ಇಲ್ಲಿ ಸಹೋದರತ್ವದಿಂದ ಬದುಕುತ್ತಿದ್ದಾರೆ. ಕೆಲವೊಂದು ನಂಬಿಕೆಗಳು, ಆಚರಣೆಗಳು, ಪದ್ಧತಿಗಳನ್ನು ಇಂದಿಗೂ ಇಲ್ಲಿ ಆಚರಿಸುತ್ತಿರುವುದನ್ನು ಕಾಣಬಹುದಾಗಿದೆ. ಈ ರೀತಿಯ ಭಾವೈಕ್ಯತೆಯು ಸಮಾಜದ ಮತ್ತು ದೇಶದ ಐಕ್ಯತೆಗೆ ಪೂರಕವಾಗಿರುತ್ತದೆ.*

**ಪ್ರಸ್ತಾವನೆ:**

ಭಾರತ ದೇಶವನ್ನು " ಜನಾಂಗೀಯ ವಸ್ತುಸಂಗ್ರಹಾಲಯ" ಎಂದು ಕರೆಯುತ್ತಾರೆ. ಏಕೆಂದರೆ ಭಾರತದಲ್ಲಿ ಹತ್ತಾರು ಧರ್ಮಗಳು ಸಾವಿರಾರು ಜಾತಿ–ಉಪಜಾತಿಗಳು ಮತ್ತು ನೂರಾರು ಭಾಷೆಗಳನ್ನು ಮಾತನಾಡುವ ವೈವಿಧ್ಯಮಯವಾದ ಜನಸಂಖ್ಯೆಯನ್ನು ಭಾರತದಲ್ಲಿ ಮಾತ್ರ ಕಾಣಬಹುದು. "ವಿವಿಧತೆಯಲ್ಲಿ ಏಕತೆ" ಭಾರತದ ಭಾವೈಕ್ಯತೆಯ ಮಂತ್ರ. ಭಾರತದಲ್ಲಿ ಪ್ರತಿಯೊಂದು ಧರ್ಮಕ್ಕೂ ಪ್ರಾಮುಖ್ಯತೆ ಇದೆ. ಧರ್ಮದ ವಿಚಾರವಾಗಿ ಅನೇಕ ಘರ್ಷಣೆಗಳಾಗಿರುವುದು ಇತಿಹಾಸದ ಪುಟಗಳಲ್ಲಿ ಕಾಣಬಹುದಾಗಿದೆ. ಹಿಂದೂಗಳು ಬಹುಸಂಖ್ಯಾತರಾಗಿದ್ದರೂ, ಇಸ್ಲಾಂ, ಕ್ರಿಶ್ಚಿಯನ್, ಬೌದ್ಧ, ಜೈನ, ಸಿಖ್, ಪಾರ್ಸಿ, ಹೀಗೆ ಹತ್ತಾರು ದರ್ಮಗಳ ನೆಲೆಯಾಗಿದೆ ನಮ್ಮ ದೇಶ. ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಹಿಂದೂ– ಮುಸ್ಲೀಂ, ಹಿಂದೂ–ಕ್ರೈಸ್ತ ಸಮುದಾಯಗಳಲ್ಲಿ ಹಾಗಾಗ ಘರ್ಷಣೆಗಳಾಗಿರುವುದು ನಮ್ಮ ಮುಂದಿದೆ. ಆದರೂ ಕೆಲವೊಮ್ಮೆ ಹಿಂದೂ ಮುಸ್ಲೀಮರು ಸಹೋದರರರಂತೆ ಬದುಕಿ ಜೀವಿಸಿರುವ ಇತಿಹಾಸ ನಮ್ಮ ಮುಂದೆ ಕಾಣುತ್ತದೆ. ಹಿಂದೂ–ಮುಸ್ಲೀಮರ ಭಾವೈಕ್ಯತೆಯ ಸಂಕೇತವಾಗಿರುವುದು ತುಮಕೂರು ಜಿಲ್ಲೆಯ, ಶಿರಾ ತಾಲೂಕಿನ ಗಂಡಿಹಳ್ಳಿ ಮಠ.

ಕಾಡುಗೊಲ್ಲ ಸಮುದಾಯದ ಸ್ಥಿತ್ಯಂತರಗಳಿಗೆ ಸಂಬಂದಿಸಿದಂತೆ ಕಾಡುಗೊಲ್ಲರು ಮತ್ತು ಇತರೆ ಸಮುದಾಯಗಳ ಸಂಬಂಧ ಹೇಗಿದೆ? ಎಂದು ನೋಡಿದಾಗ ಕಾಡುಗೊಲ್ಲರು ಮತ್ತು ಕುರುಬರು, ಕಾಡುಗೊಲ್ಲರು ಮತ್ತು ನಾಯಕರು, ಕಾಡುಗೊಲ್ಲರು ಮತ್ತು ಅಗಸರು, ಕಾಡುಗೊಲ್ಲರು ಮತ್ತು ಇತರೇ ಗೊಲ್ಲರು, ಕಾಡುಗೊಲ್ಲರು ಮತ್ತು ಹೆಳವರು ಹೀಗೆ ಬೇರೆ ಬೇರೆ ಜಾತಿಗಳೊಟ್ಟಿಗೆ ಕಾಡುಗೊಲ್ಲ ಸಮುದಾಯವು ಉತ್ತಮ ಸಂಬಂಧ ಹೊಂದಿದೆ.

ಹಾಗೆಯೇ ಕಾಡುಗೊಲ್ಲರು ಮತ್ತು ಮುಸ್ಲೀಮರು ಕೂಡ ಸುಮಾರು ಮೂರು ಶತಮಾನಗಳಿಗಿಂತಲೂ ಹಿಂದಿನಿಂದ ಇಲ್ಲಿಯವರೆವಿಗೂ ಸಹೋದರತ್ವದಿಂದ ಬದುಕುತ್ತಿರುವುದನ್ನು ನಾವು ಈ ಗಂಡಿಹಳ್ಳಿ ಮಠದಲ್ಲಿ

ಕಾಣಬಹುದಾಗಿದೆ. ಇದಕ್ಕೆ ಸಂಬಂದಿಸಿದಂತೆ ನಾನು ಕ್ಷೇತ್ರಕಾರ್ಯವನ್ನು ಮಾಡಿ ಪ್ರಾಥಮಿಕ ಮೂಲದ ಮಾಹಿತಿಯಿಂದ ಈ ಪತ್ರಿಕೆ ಮಂಡಿಸುತ್ತಿದೇನೆ.

**ಅಧ್ಯಯನ ಉದ್ದೇಶಗಳು:**

- ಕಾಡುಗೊಲ್ಲ ಮತ್ತು ಮುಸ್ಲೀಮರ ನಡುವಿನ ಭಾವೈಕ್ಯತೆಯನ್ನು ತಿಳಿಯುವುದು.
- ಗಂಡಿಹಳ್ಳಿ ಮಠ ದತ್ತಾತ್ರೇಯ ಬಾಬಾ ಬುಡೇನ್‌ಗಿರಿ ದರ್ಗಾದ ಇತಿಹಾಸವನ್ನು ತಿಳಿಯುವುದು.
- ಇಲ್ಲಿ ನಡೆಯುವ ಆಚರಣೆಗಳು, ಜಾತ್ರೆ ಮತ್ತು ಉತ್ಸವಗಳ ಬಗ್ಗೆ ಪರಿಶೀಲಿಸುವುದು.

**ಅಧ್ಯಯನ ವಿದಾನ**

ಪ್ರಸ್ತುತ ಕಾಡುಗೊಲ್ಲ ಮತ್ತು ಮುಸ್ಲೀಂ ಸಮುದಾಯಗಳ ಭಾವೈಕ್ಯತೆಗೆ ಸಂಬಂದಿಸಿದಂತೆ ಪ್ರಾಥಮಿಕ ಮೂಲದ ಮಾಹಿತಿಯನ್ನು ಪಡೆದಿರುತ್ತೆನೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಾಡುಗೊಲ್ಲ ಸಮುದಾಯದ ಪೂಜಾರಿಗಳು ಅಂದರೆ ದರ್ಗಾದ ಒಳಗೆ ಪೂಜೆ ಮಾಡುವ ಕಾಡುಗೊಲ್ಲ ಪೂಜಾರಿಗಳು, ಮುಸ್ಲೀಂ ಸಮುದಾಯದ ವ್ಯಕ್ತಿಗಳಿಂದ, ಗುಂಪು ಚರ್ಚೆ ಮಾಡುವುದರ ಮೂಲಕವೂ ಮಾಹಿತಿಯನ್ನು ಪಡೆದು ಕೊಂಡಿರುತ್ತೇನೆ.

ಒಟ್ಟಾರೆಯಾಗಿ ಪ್ರಾಥಮಿಕ ಮೂಲದ ಮಾಹಿತಿಯಿಂದ ಸಂಪೂರ್ಣವಾದ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ.

**ಅದ್ಯಯನದ ಪ್ರಾಮುಖ್ಯತೆ**

ಪ್ರಸ್ತುತ ಧರ್ಮ–ಧರ್ಮಗಳ ನಡುವೆ ಕಂದಕ, ಅಂತರ ಹೆಚ್ಚುತ್ತಿದ್ದು, ಘರ್ಷಣೆಗಳಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಈ ಧರ್ಮ ದೊಡ್ಡದು, ಆ ಧರ್ಮ ದೊಡ್ಡದು ಎಂದು ಧಾರ್ಮಿಕ ವಿಷಯಗಳಿಗೆ ಸಂಬಂಧಿಸಿದಂತೆ ಮನಸ್ತಾಪ, ಕಚ್ಚಾಟ, ಘರ್ಷಣೆಗಳಾಗುತ್ತಿರುವ ಈ ಸಂದರ್ಭದಲ್ಲಿ ಹಾಗೊಂದು ಹೀಗೊಂದು ಸಣ್ಣಪುಟ್ಟ ಸಮುದಾಯಗಳು ಇನ್ನೊಂದು ಧರ್ಮದೊಂದಿಗೆ ಐಕ್ಯತೆ, ಸಹೋದರತ್ವ ಹೊಂದಿರುವುದನ್ನು ಅಪರೂಪವಾಗಿ ಕಾಣಬಹುದಾಗಿದೆ.

ಬುಡಕಟ್ಟಿನ ಲಕ್ಷಣಗಳನ್ನು ಹೊಂದಿದ್ದು, ಅಲೆಮಾರಿ ಜೀವನ ಮಾಡಿಕೊಂಡು, ಕುರಿಗಾಹಿಗಳಾಗಿರುವ ಕಾಡುಗೊಲ್ಲ ಸಮುದಾಯ ಮತ್ತು ಸಣ್ಣ ಪುಟ್ಟ ವ್ಯಾಪಾರ ಮಾಡಿಕೊಂಡು ಬದುಕುತ್ತಿರುವ ಮುಸೀಂ ಸಮುದಾಯಗಳ ನಡುವಿನ ಈ ಬಾವೈಕ್ಯತೆ ಇಂದು ಬಹಳ ಪ್ರಸ್ತುತವೆನಿಸುತ್ತದೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಇಂದು ವಿವಿಧ ಧರ್ಮಗಳ ನಡುವೆ ಘರ್ಷಣೆ, ಕೋಮು, ಮುಂತಾದ ಧಾರ್ಮಿಕ ಅಪಹೋಂದಾಣಿಕೆಯ ಸಂದರ್ಭದಲ್ಲಿ ಈ ಎರಡು ಸಮುದಾಯಗಳ ನಡುವಿನ ಸಂಬಂಧ, ಸಾಮರಸ್ಯ, ಐಕ್ಯತೆ ಒಂದು ಮಾದರಿಯೇ ಸರಿ.

ತುಮಕೂರು ಜಿಲ್ಲೆ, ಶಿರಾ ತಾಲ್ಲೂಕಿನಿಂದ ಸುಮಾರು 33 ಕಿಲೋಮೀಟರ್ ದೂರದಲ್ಲಿ ಗಂಡಿಹಳ್ಳಿ ಮಠ ಎಂಬ ಸ್ಥಳವಿದೆ. ಆಂದ್ರಪ್ರದೇಶದ ಹೇಮಾವತಿಯ ಗಡಿಬಾಗದಲ್ಲಿ ಈ ಮಠವಿದೆ. ದೊಡ್ಡಬಾಣಗೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಡುತ್ತದೆ.

ಇಲ್ಲಿ ಕಾಡುಗೊಲ್ಲರ 25 ಕುಟುಂಬಗಳು ಮತ್ತು ಮುಸಲ್ಮಾನರ 30 ಕುಟುಂಬಗಳು ವಾಸಿಸುತ್ತಿದ್ದಾರೆ. ಈ ಸ್ಥಳವು ಕಾಡುಗೊಲ್ಲ ಮತ್ತು ಮುಸ್ಲಿಂಮರ ಬಾವೈಕ್ಯತೆಯನ್ನು ಎತ್ತಿ ತೋರಿಸುತ್ತದೆ. ಈ ದರ್ಗಾದಗರ್ಭಗುಡಿಯಲ್ಲಿ ಪೂಜೆ ಮಾಡುವವರು ಕಾಡುಗೊಲ್ಲರು. ಮುಸ್ಲೀಮರು ಗರ್ಭಗುಡಿಯ ಹೊರಗಡೆಯಲ್ಲಿ ಇರುತ್ತಾರೆ. ಗರ್ಭಗುಡಿಯ ಹೊರಗೆ ಮುಸ್ಲೀಮರು ಖುರಾನ್ ಓದುತ್ತಾರೆ. ಇದೊಂದು ವಿಚಿತ್ರ ಎನಿಸಿದರು ವಾಸ್ತವ.

ಪ್ರತಿ ಗುರುವಾರ ವಿಶೇಷ ಪೂಜೆಯ ದಿನ ಆದರೂ ಪ್ರತಿ ದಿನ ಬೆಳಗ್ಗೆ ಮತ್ತು ಸಂಜೆ ಕಾಡುಗೊಲ್ಲರ ಪೂಜಾರಿಗಳು ದೇವರ ಪೂಜೆ ಮಾಡುತ್ತಾರೆ ಪ್ರತಿ ವರ್ಷ ಉರುಸ್ ಮತ್ತು ಮೊಹರಾಂ ಹಬ್ಬಗಳನ್ನು ಕಾಡುಗೊಲ್ಲರು ಮತ್ತು ಮುಸ್ಲಿಮರು ವಿಜೃಂಬಣೆಯಿಂದ ಆಚರಿಸುತ್ತಾರೆ.

ಇದರ ಇತಿಹಾಸವನ್ನ ಕೆದಕುತ್ತಾ ಹೋದಾಗಸುಮಾರು 300 ವರ್ಷಗಳ ಹಿಂದೆ ಕಾಡುಗೋಲ್ಲರ ವ್ಯಕ್ತಿಯೊಬ್ಬ ಒಂದು ಕಲ್ಲಿನ ಮೂರ್ತಿಯನ್ನು ತಂದು ಅದನ್ನು ಪೂಜೆ ಮಾಡುತ್ತಿರುತ್ತಾನೆ. ಆಜಾಗದಲ್ಲಿ ಮುಸ್ಲಿಮರು ಇದು ನಮ್ಮ ಪೂಜಾ ಸ್ಥಳ, ನಾವು ಇಲ್ಲಿ ನಮಾಜ್ ಮಾಡುವುದು, ಪೂಜೆ ಪುನಸ್ಕಾರಗಳನ್ನು ಮಾಡುವುದು ಎಂದು ಹೇಳುತ್ತಾರೆ. ಕಾಡುಗೊಲ್ಲ ಪೂಜಾರಿಯನ್ನು ನೀನು ಸ್ನಾನ ಮಾಡೋದಿಲ್ಲ, ನೀನು ಕಚ್ಚೇ ಹಾಕಿಕೊಂಡು ಪೂಜೆ ಮಾಡುತ್ತಿಯ ಇದು ಸಲ್ಲದು ಎಂದು ಹೇಳಿದಾಗ ಕಾಡುಗೊಲ್ಲ ಪೂಜಾರಿಯು ಇಲ್ಲಿ ಇದರ ಮೂಲ ನಮ್ಮದು ನಾವೇ ಪೂಜೆ ಮಾಡಬೇಕು ಎಂದು ಹೇಳಿದಾಗ ಮುಸ್ಲೀಂಮರು ನೀವು ಪೂಜೆ ಮಾಡಬೇಕೆಂದರೆ ಹಸುವಿನ ಮಾಂಸ ತಿನ್ನಬೇಕು ಎಂಬ ಶರತ್ತನ್ನು ಹಾಕಿ ಗರ್ಭವಾದ ಹಸುವನ್ನು ಕೊಯ್ದು ಎಲ್ಲರಿಗೂ ಬಡಿಸಿ ಎಲೆಗಳನ್ನು ಮುಚ್ಚಿರುತ್ತಾರೆ. ನಂತರ ಎಲ್ಲರೂ ಊಟ ಮಾಡುವ ಮೊದಲು ಕಡುಗೊಲ್ಲರ ಪೂಜಾರಪ್ಪನು ತನ್ನ ಬೆತ್ತದಿಂದ ಎಲ್ಲಾ ಊಟ ಬಡಿಸಿದ ಎಲೆಗಳ ಮೇಲೆ ಮಂತ್ರಿಸಿಕೊಂಡು ಬಂದು, ಸರಿ ಎಲ್ಲಾ ಊಟ ಮಾಡಿ ಎಂದು ಎಲೆ ತಗೆದಾಗ ಮುಸ್ಲೀಮರ ಎಲೆಯಲ್ಲಿ ಊಟವೆಲ್ಲಾ ಹುಳಗಳಾಗಿ ಪಿತಪಿತ ಎನ್ನುತ್ತಿದ್ದರೆ, ಕಾಡುಗೊಲ್ಲರ ಎಲೆಗಳಲ್ಲಿ ಹಸುವಿನ ಮಾಂಸ ಸಕ್ಕರೆ ಮತ್ತು ಹೂಗಳಾಗಿ ಬದಲಾದವು. ಇದನ್ನು ನೋಡಿದ ಮುಸ್ಲಿಮರು ಕಾಡುಗೊಲ್ಲ ಪೂಜಾರಿಯ ಕಾಲಿಗೆ ಬಿದ್ದು ನಮ್ಮದು ತಪ್ಪಾಯಿತು ಇನ್ನು ಮುಂದೆ ದೇವರ ಗರ್ಭಗುಡಿಯ ಒಳಗೆ ನಾವು ಬರುವುದಿಲ್ಲ, ನೀವೆ ಪೂಜೆ ಮಾಡಿ, ನಾವೇನಿದ್ದರು ಗರ್ಭಗುಡಿಯ ಹೊರಗೆ ಖುರಾನ್ ಓದುವುದು ಮತ್ತು ನಮಾಜ್ ಮಾಡುತ್ತೇವೆ ಎಂದು ಹೇಳಿದರು.

ಅಂದಿನಿಂದಲೂ ಕಾಡುಗೊಲ್ಲರೇ ಈ ದರ್ಗಾದ ಗರ್ಭಗುಡಿಯಲ್ಲಿ ಪೂಜೆ ಮಾಡುವುದು. ಎಂಬ ಮಾಹಿತಿಯನ್ನು ರಂಗನಾಥಪ್ಪ ಗಂಡಿಹಳ್ಳಿ ಮಠ ಇವರು ನೀಡಿದರು ಮುಂದುವರೆದು ಅಲ್ಲಿನ ಹಲವು ವಿಶೇಷತೆಗಳನ್ನು ವಿವರಿಸಿದರು.

**ಉರುಸ್ ಆಚರಣೆ:**

ಪ್ರತಿ ವರ್ಷ ಸೆಪ್ಟೆಂಬರ್ – ನವೆಂಬರ್ ತಿಂಗಳಲ್ಲಿ ಈ ದರ್ಗಾದ ಮುಂದೆ ವಿಶಾಲವಾದ ಆವರಣದಲ್ಲಿ ಒಂದು ಧ್ವಜಸ್ಥಂಭವಿದೆ ಇದಕ್ಕೆ ಒಂದು ಹಸಿರು ಬಾವುಟವನ್ನು ಹಾರಾಡುವಂತೆ ಹಾರಿಸಿರುತ್ತಾರೆ. ಇದು ಮುಸ್ಲಿಮರ ಸಂಕೇತಗಳನ್ನೇ ಹೊಂದಿರುವ (ಅರ್ಧ ಚಂದ್ರ, ನಕ್ಷತ್ರ ಮುಂತಾದವುಗಳು) ದೊಡ್ಡ ಹಸಿರು ಬಾವುಟವನ್ನು ಹಾರಿಸುವುದೇ ಉರುಸ್ ಆಚರಣೆ. ಪ್ರತಿ ವರ್ಷವು ಸೆಪ್ಟೆಂಬರ್ ನವೆಂಬರ್ ತಿಂಗಳಲ್ಲಿ ಈ ಉರುಸ್ ಆಚರಣೆಯನ್ನು ಕಾಡುಗೊಲ್ಲರು ಮತ್ತು ಮುಸ್ಲೀಮರು ಸೇರಿ ವಿಜೃಂಬಣೆಯಿಂದ ಆಚರಿಸುತ್ತಾರೆ ಒಂದು ವರ್ಷದವರೆಗೂ ಆ ಬಾವುಟವನ್ನು ಬದಲಿಸುವುದಿಲ್ಲ.

**ಕೆಂಡ ತುಳಿಯುವ ಆಚರಣೆ:-**

ಮೊಹರಾಂ ಹಬ್ಬದಂದು ಇಲ್ಲಿ ಜಾತ್ರೆಯೂ ನಡೆಯುತ್ತದೆ ಕರ್ನಾಟಕದ ಹಲವು ಜಿಲ್ಲೆಗಳಿಂದ ಇಲ್ಲಿಗೆ ಜನರು ಆಗಮಿಸುತ್ತಾರೆ. ಹಾಗೂ ನೆರೆ ರಾಜ್ಯಗಳಾದ ಆಂದ್ರಪ್ರದೇಶ, ತಮೀಳುನಾಡು, ಮುಂತಾದ ರಾಜ್ಯಗಳಿಂದ ಇಲ್ಲಿಗೆ ಜನರು ಆಗಮಿಸುತ್ತಾರೆ. ದರ್ಗಾದ ಮುಂದೆ ವಿಶಾಲವಾದ ಜಾಗ, ಆ ಜಾಗದ ಮಧ್ಯೆ ಕೆಂಡ ಮಾಡಲು ಸ್ವಲ್ಪ ತಗ್ಗಾದ ಪ್ರದೇಶದಲ್ಲಿ ಸುಮಾರು 12 ಅಡಿಗಳಷ್ಟು ಎತ್ತರಕ್ಕೆ ಕಟ್ಟಿಗೆಗಳನ್ನು ಹಾಕಿ ಬೆಂಕಿ ಹಾಕಿ ನಿಗಿ ನಿಗಿ ಉರಿಯುವ ಕೆಂಡ ಮಾಡಿ ಭಕ್ತಾದಿಗಳು ಆ ಕೆಂಡವನ್ನು ತುಳಿಯುತ್ತಾ ಸಾಗುತ್ತಾರೆ ಜನರು ಭಕ್ತಿ, ನಿಷ್ಠೆಯಿಂದ ಈ ಕೆಂಡ ತುಳಿಯುವ ಕೈಂಕರ್ಯವನ್ನು ಮಾಡುತ್ತಾರೆ.

**ಬೆಲ್ಲ ತೂಗುವ ಶಾಸ್ತ್ರ:**

ಭಕ್ತಾದಿಗಳು ಇಲ್ಲಿಗೆ ಬಂದು ಪೂಜೆ ಪುನಸ್ಕಾರಗಳನ್ನು ಮಾಡಿ ತಮ್ಮ ಕೋರಿಕೆಗಳಿಗೆ ಹರಕೆ ಹೊರುತ್ತಾರೆ. ಉದಾ: ಮಕ್ಕಳಾಗದಿದ್ದವರು, ಮಕ್ಕಳಾದರೆ ಇಂತಿಷ್ಟು ಬೆಲ್ಲ ಅರ್ಪಿಸುತ್ತೇವೆ ಎಂದು, ಹೀಗೆ ಇನ್ನಿತರೆ ಕೊರಿಕೆಗಳನ್ನು ಹರಕೆ ಮಾಡಿಕೊಂಡು ಅವು ಈಡೇರಿದಾದ ಭಕ್ತಾದಿಗಳು ಬಂದು ಪೂಜೆ ಮಾಡಿಸಿ ಬೆಲ್ಲ ತೂಕ ಮಾಡಿಸಿ ದರ್ಗಾಕ್ಕೆ ನೀಡಿ ತಮ್ಮ ಹರಕೆ ತೀರಿಸುತ್ತಾರೆ.

ಈ ಹರಕೆ ಬೆಲ್ಲವನ್ನು ಮುಸ್ಲೀಮರು ಮತ್ತು ಕಾಡುಗೊಲ್ಲ ಪೂಜಾರಿಗಳು ಸಮವಾಗಿ ಹಂಚಿಕೊಳ್ಳುತ್ತಾರೆ. ಹರಿಕೆಯಿಂದ ಗಂಡು ಮಕ್ಕಳಾದರೆ ಮುಸ್ಲೀಂಮರು ಬುಡೇನ್ ಸಾಬ್, ಬುಡೇನ್ ಖಾನ್ ಮುಂತಾಗಿ, ಹಿಂದುಗಳು, ಬುಡ್ಡಣ್ಣ, ಬುಡ್ಡಮ್ಮ ಮುಂತದ ಹೆಸರುಗಳನ್ನಿ ಇಡುತ್ತಾರೆ.

**ಗಾಳಿ ಸೆಟಕು ಬಿಡಿಸುವುದು (ಭೂತ, ದೆವ್ವ ಬಿಡಿಸುವುದು)**

ರಾಜ್ಯದ ನಾನಾ ಜಿಲ್ಲೆಗಳಿಂದ ಮತ್ತು ನೆರೆ ರಾಜ್ಯಗಳಿಂದಲು ಭೂತ ಅಥವಾ ದೆವ್ವ ಹಿಡಿದವರನ್ನು ಆ ನಂಬಿಕೆ ಇರುವವರು ಇಲ್ಲಿಗೆ ಪ್ರತಿ ಗುರುವಾರ ವಿಶೇಷ ಪೂಜೆ ಹಾಗೂ ಪ್ರತಿ ತಿಂಗಳ ಅಮವಾಸ್ಯೆ ಮತ್ತು ಹುಣ್ಣಿಮೆಯ ದಿವಸ ಇಲ್ಲಿಗೆ ಬಂದು ದೆವ್ವ – ಪಿಶಾಚಿ, ಪೀಡೆ ಮುಂತಾದವುಗಳನ್ನು ಬಿಡಿಸಿಕೊಂಡು ಹೋಗುವ ಪ್ರತೀತಿ ಇಂದಿಗೂ ಇಲ್ಲಿ ಇರುವುದು ವಿಶೇಷ.

ದರ್ಗಾದ ಒಳಾಂಗಣದಲ್ಲಿ ಎರಡು ದೊಡ್ಡ ನಗಾರಿಗಳಿವೆ ದೆವ್ವ ಅಥವಾ ಭೂತ ಬಿಡಿಸುವ ಸಂದರ್ಭದಲ್ಲಿ ಈ ನಗಾರಿಗಳನ್ನು ಜೋರಾಗಿ ಬಾರಿಸುವುದೂ ವಿಶೇಷ. ಈ ಆಚರಣೆಯಿಂದ ನೂರಾರು ಭಕ್ತರು ಇಲ್ಲಿಗೆ ಬಂದು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಹೋಗಿದ್ದಾರೆ. ಆದ್ದರಿಂದಲೇ ನೆರೆ ರಾಜ್ಯಗಳಿಂದಲೂ ಇಲ್ಲಿಗೆ ಭಕ್ತರು ಬರುತ್ತಾರೆ.

ದರ್ಗಾದ ಬಳಿ ಕೋಳಿ ಕೊಯ್ಯುವುದಿಲ್ಲ ಕುರಿ–ಮೇಕೆಗಳನ್ನು ಮಾತ್ರ ಹಲಾಲ್ ಮಾಡುತ್ತಾರೆ ಈ ದರ್ಗಾದಿಂದ ಸ್ವಲ್ಪ ದೂರ ಕೆಂಚರಾಯನ ದೇವಸ್ಥಾನವಿದೆ ಅಲ್ಲಿ ಕೋಳಿ ಕೊಯ್ಯುತ್ತಾರೆ ಈ ನಿಯಮಗಳನ್ನು ಇಂದಿಗೂ ಭಕ್ತದಿಗಳೂ ಆಚರಿಸಿಕೊಂಡು ಬಂದಿದ್ದಾರೆ ಹಾಗೂ ಈ ನಂಬಿಕೆಗಳನ್ನು ನಂಬಿ ಬದುಕುತ್ತಿದ್ದಾರೆ. ಇಲ್ಲಿರುವವರಾರು ಹಂದಿ ಮಾಂಸವನ್ನು ಮುಟ್ಟುವುದಿರಲಿ ಅಲ್ಲೆಲ್ಲಿಯೂ ನೋಡಬೇಕೆಂದರೂ ಒಂದು ಹಂದಿಯೂ ಕಾಣಸಿಗುವುದಿಲ್ಲ.

**ಅದ್ಯಯನದಿಂದ ಕಂಡುಕೊಂಡ ಸತ್ಯಾಂಶಗಳು:–**

- ❖ ಶತ ಶತ ಮಾನಗಳಿಂದಲೂ ಕಾಡುಗೊಲ್ಲ ಮತ್ತು ಮುಸ್ಲೀಂ ಸಮುದಾಯದ ನಡುವೆ ಇಲ್ಲಿ ಯಾವುದೇ ಗಲಾಟೆ, ಘರ್ಷಣೆಗಳು ಆಗಿರುವುದಿಲ್ಲ.
- ❖ ಗಂಡಿಹಳ್ಳಿ ಮಠ/ ದರ್ಗಾದ ಹಬ್ಬ, ಜಾತ್ರೆ, ಉತ್ಸವಗಳಲ್ಲಿ ಕಾಡುಗೊಲ್ಲ ಮತ್ತು ಮುಸ್ಲೀಂ ಸಮುದಾಯಗಳೆರೆಡೂ ಬಾಗಿಯಾಗುತ್ತಿರುವುದು.
- ❖ ಈ ಎರಡು ಸಮುದಯಗಳ ಭಾವೈಕ್ಯತೆ ಸಮಜಾದ ಬೇರೆ ಬೇರೆ ಸಮುದಾಯಗಳಿಗೆ ಮಾದರಿಯಾಗಿರುವುದು.
- ❖ ಇಲ್ಲಿನ ಸಮುದಾಯಗಳು ಇಂದಿಗೂ ಕೆಲವು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿರುವುದು ಕಂಡು ಬರುತ್ತದೆ.

ಇಲ್ಲಿ ಇಂದಿಗೂ ಮುಸ್ಲೀಮರು ಮತ್ತು ಕಾಡುಗೋಲ್ಲರು ಸಹೋದರತ್ವದಿಂದ ಸಾಮರಸ್ಯದಿಂದ ಬದುಕುತ್ತಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನಾನು ಕಂಡುಕೊಂಡಿದ್ದೇನೆ.

**ಅಧಾರ**:

ಕ್ಷೇತ್ರಕಾರ್ಯದ ಮಾಹಿತಿ.

**ವಕ್ತೃಗಳು**: ರಂಗನಾಥಪ್ಪ, ಚಿಕ್ಕಣ್ಣ, ರಂಗಸ್ವಾಮಿ, ಮೊಹಮದ್ ಬುಡೇನ್ ಖಾಸೀಂ ಸಾಬ್. ಗಂಡಿಹಳ್ಳಿ ಮಠ.